ಅ) 4637

ಇ) 502 ಅರಣ್ಯ ರಕ್ಷಕರ ಹುದ್ದೆಗಳು ಖಾಲಿ ಇರುವುದರಿಂದ ಸುಮಾರು 200 ಅರಣ್ಯ ರಕ್ಷಕರ ಕೊರತೆ ಇರುತ್ತದೆ.

ಈ) 1988 ನೇ ಸಾಲಿನಿಂದ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಇಲಾಖೆಯು ಖಾಲಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ಕ್ರಮ ತೆಗೆದುಕೊಂಡಿರುವುದಿಲ್ಲ. 223 ಹುದ್ದೆಗಳನ್ನು ತುಂಬುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿದೆ. ಅಲ್ಲದೆ ಹುದ್ದೆಗಳನ್ನು ಬಡ್ತಿಯಿಂದ ಹಾಗೂ ಅನುಕಂಪದನ್ನಯ ನೇಮಕಾತಿಯಿಂದ ತುಂಬಲಾಗುತ್ತಿದೆ.

ರಾಜ್ಯಕ್ಕೆ ಅಗತ್ಯವಿರುವ ತಹಶೀಲ್ದಾರರ ಹುದ್ದೆಗಳು

577 (812) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಅಗತ್ಯವಿರುವ ತಹಶೀಲ್ದಾರರ ಹುದ್ದೆಯ ಸಂಖ್ಯೆ ಎಷ್ಟು?

ಆ) ಈ ಪೈಕಿ ಈಗ ಮಂಜೂರು ಮಾಡಿರುವ ಹುದ್ದೆಗಳೆಷ್ಟು?

ಇ) ಎಷ್ಟು ತಹಶೀಲ್ದಾರರ ಹುದ್ದೆಗಳು ಕೊರತೆ ಇವೆ.

ಈ) ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) 406 (ನಿಯೋಜನೆ ಮತ್ತು ರಜಾಮೀಸಲಾತಿ ತಹಶೀಲ್ದಾರರ ಹುದ್ದೆಗಳನ್ನು ಒಳಗೊಂಡಂತೆ)

ಆ) -ಅದೇ-

ಇ) -ಇಲ್ಲ-

ಈ) 54 ಖಾಲಿ ಹುದ್ದೆಗಳನ್ನು ಬಡ್ತಿಯ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಗತ್ಯವಿರುವ ಸಬ್ ರಿಜಿಸ್ಟ್ರಾರ್ ಹುದ್ದೆಗಳ ಸಂಖ್ಯೆ

579 (815) ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಬೀದರ್):- ಮಾನ್ಯ ಕಂದಾಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಅಗತ್ಯವಿರುವ ಸಬ್-ರಿಜಿಸ್ಟ್ರಾರ್‌ಗಳ ಹುದ್ದೆಗಳೆಷ್ಟು?

ಆ) ಇದರಲ್ಲಿ ಈಗ ಮಂಜೂರಾಗಿರುವ ಸಬ್-ರಿಜಿಸ್ಟ್ರಾರ್‌ಗಳ ಸಂಖ್ಯೆ ಎಷ್ಟು?

ಇ) ಎಷ್ಟು ರಿಜಿಸ್ಟ್ರಾರ್ ಹುದ್ದೆಗಳು ಖಾಲಿ ಇವೆ?

ಈ) ಇವುಗಳನ್ನು ತುಂಬಲು ಸರ್ಕಾರ ಕೈ ಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) 233

ಆ) 228

ಇ) 13 (ಉಪ-ನೋಂದಣಾಧಿಕಾರಿಗಳು)